ಓ.ಎಸ್ಃ 8/2009

ಪಿ.ಡಬ್ಲ್ಯೂಃ 05

**ದಿನಾಂಕಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು 2 ನೇ ಪ್ರತಿವಾದಿಗಳ ಪರ ಶ್ರೀ ಎ.ಕೆ.ಜಿ. ವಕೀಲರಿಂದಃ**

1. ವಾದಿಯು ನನಗೆ ಚಿಕ್ಕಪ್ಪನ ಮಗ ಆಗಬೇಕು. ನಾನು ಜಮಖಂಡಿಯಲ್ಲಿ ವಾಸವಾಗಿರುತ್ತೇನೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ ಬರುವುದಿಲ್ಲ. 1 ನೇ ಪ್ರತಿವಾದಿಯು ಸನ್ 2006 ರಿಂದ ಪರಿಚಯ ಆಗಿರುತ್ತದೆ. 1 ನೇ ಪ್ರತಿವಾದಿಯು ಮೀನಿನ ಅಂಗಡಿಗೆ ಬರುತ್ತಿರುವ ಕಾರಣ ಪರಿಚಯಸ್ಥರು ಆಗಿರುತ್ತಾರೆ. ನಾನು ಗ್ಯಾರೇಜ್ ಅಂಗಡಿ ಇರುತ್ತದೆ. ಮೀನಿನ ಅಂಗಡಿ ಮತ್ತು ನನ್ನ ಗ್ಯಾರೇಜ್ ಎದುರು-ಬದುರು ಇರುತ್ತದೆ. ಜಮೀನನ್ನು ಖುದ್ದಾಗಿ ನೋಡಿರುವುದಿಲ್ಲ. ಜಮೀನು ಯಾವ ರೀತಿ ಇರುತ್ತದೆ ನನಗೆ ಗೊತ್ತಿಲ್ಲ. ಸದರಿ ಜಮೀನು ಯಾವ ರೀತಿ ಇರುತ್ತದೆ ಎಂದು ನಾನು ಕೇಳಿರುವುದಿಲ್ಲ.

2. 1 ನೇ ಪ್ರತಿವಾದಿಯು ತನ್ನ ಆಸ್ತಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ನಾವು ಕುಳಿತುಕೊಂಡಿದ್ದಾಗ ತಿಳಿಸಿರುತ್ತಾರೆ. ನಾನು, ಬಾಬು ನಾಗರಾಳ, ಬಸೀರ ಕಂಗನ್ನೊಳಿ, ರಮೇಶ ಮೋರೆ, ರಾಮ ಮಾಂಗ್, ಶ್ರೀಶೈಲ್ ಇರುವಾಗ ಮಾರಾಟ ಮಾಡುವ ವಿಷಯ ತಿಳಿಸಿರುತ್ತಾನೆ. ಸದರಿ ವಿಷಯವನ್ನು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ 28.10.2006 ರಂದು ಮಾರಟ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾನೆ. ಸದರಿ ವಿಷಯವನ್ನು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. 2-3 ದಿನಗಳ ನಂತರ ವ್ಯವಹಾರ ಆಗಿರುತ್ತದೆ. ದಿಃ 30.10.2006 ರಂದು ವ್ಯವಹಾರ ಆಗಿರುತ್ತದೆ.

3. 1 ನೇ ಪ್ರತಿವಾದಿಯು 2,50,000/- ರೂಗಳಿಗೆ ಕೇಳಿದ್ದು, 1,10,000/- ಗಳಿಗೆ ವ್ಯವಹಾರ ಆಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯು 90,000/- ಖರೀದಿ ನೀಡಬೇಕೆಂದು ಕೇಳಿದ್ದರು. 1 ಎಕರೆಗೆ ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಒಟ್ಟಾಗಿ ಮಾರಾಟ

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಪರವಾಗಿ ಹಿರಿಯರು ರಾಮ ಮಾಂಗ್ ರವರು ಬಂದಿರುತ್ತಾರೆ, ಹಿರಿಯರು ಯಾರು ಬಂದಿರುವುದಿಲ್ಲ. ವ್ಯವಹಾರ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. ಹಿಸಾರ ಪತ್ರವನ್ನು ಯಾರು ಮತ್ತು ಯಾವಾಗ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಜೀರ ರವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬಾಂಡನ್ನು ನಜೀರವರು ಟೈಪ್ ಮಾಡಿಕೊಂಡು ಬಂದಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು 1ನೇ ಪ್ರತಿವಾದಿಯು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಬಾಂಡ ರೈಟರ ಅಂಗಡಿಯಲ್ಲಿ ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ. ಬಾಂಡ ರೈಟರ್ ಯಾರು ಎಂದು ನನಗೆ ಗೊತ್ತಿಲ್ಲ. ಬಾಂಡ್ ಟೈಪ ಮಾಡಿಕೊಂಡು ಬರುವಾಗ ನಾವು ಯಾರು ಇರಲ್ಲಿಲ್ಲಾ ಎಂದರೆ ಸರಿಯಲ್ಲ. ವಾದಿಯು ನನಗೆ ಸಂಬಂಧಿಕರು ಆಗಿರುವ ಕಾರಣ ವಾದಿಗೆ ಸಹಾಯ ಮಾಡಲು ಬಾಂಡನ್ನು 1ನೇ ಪ್ರತಿವಾದಿಯು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಹಿಸಾರ ಹಣವನ್ನು ಮೀನಿನ ಅಂಗಡಿಯಲ್ಲಿ ನೀಡಿರುತ್ತಾರೆ. ಪಾವತಿ ಬರೆಸಿಕೊಂಡಿದ್ದರ ಎಂಬ ಪ್ರಶ್ನೆಗೆ ಸಾಕ್ಷಿಯು ಬಾಂಡನ್ನು ಬರೆಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಬೇರೆ ಪಾವತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿ ಮತ್ತು ಸಾಕ್ಷಿದಾರರು ಸೇರಿಕೊಂಡು ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ವಾದಿಯು 1ನೇ ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ, ನನ್ನ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 2 ರಿಂದ 4ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯ ಜಮೀನು 1ನೇ ಪ್ರತಿವಾದಿಗೆ ಅವರ ತಂದೆಯಿಂದ ಬಂದಿರುತ್ತದೆ. 1ನೇ ಪ್ರತಿವಾದಿಗೆ ಎಷ್ಟು ಜನ ಅಣ್ಣ-ತಮ್ಮಂದಿರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ವಾದಿಗೆ

ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯು ನನ್ನ ಸಂಬಂಧಿಕನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು KIDB ರವರು ಸ್ವಾಧಿನಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು 3 ಮತ್ತು 4 ಪ್ರತಿವಾದಿಯರು ಪಾಟೀ ಸವಾಲಿಗೆ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**